Bus Stands at Basavana-Bagewadi and Zalki

87. Sri J. L. KABADE (Ballolli):—

Will the Minister for Labour be pleased to state :—

(*a*) whether it is a fact that the then Minister for Transport (Sri D. Devaraj Urs) had laid the foundation stones of the Mysore State Road Transfort Corporatson Bus-Stand at Basavana-Bagevadi and Zalki ;

(*b*) whether there was a'so a proposal to construct Mysore State Road Transport Corporation Guest House at Zalki ;

(*c*) if so, whether the people of those areas have been provided with the said facility ;

(*d*) if not, the reasons for not taking up the work so far ?

Sri AZEEZ SAIT (Minister for Labour).—

(*a*) Yes.

(*b*) No.

(*c*) No.

(*d*) (i) The bus stand at Basavana-Bagewadi could not be taken up due to change in design and as there was no response from contractors.

(ii) The BusStand at Zalki could not be taken up as there was no response to several tender calls.

Construction of Bus-Stand at Basavana-Bagewadi in Bijapur District

88. B. S. PATIL (Bagewadi).—

Will the Minister for labour be pleased to state :—

(*a*) whether the then Minister for Transfort had laid the foundation stone of a bus-stand at Basavana-Bagewadi in Bijapur District in the year 1965-66 ;

(*b*) if so, the reason for not taking up the said work so far ?

Sri AZEEZ SAIT (Minister for Labour).—

(*a*) Yes.

(*b*) The accommodation provided in the estimate sanctioned for Rs. 1,25,000 during April 1966 was not sufficient for the intensity of traffic.

ಶ್ರೀ ಜೆ. ಎಲ್. ಕಬಾಡಿ.—'ಈ' ಪ್ರಶ್ನೆಗೆ ಉತ್ತರವಾಗಿ "ನಕ್ಷೆಯಲ್ಲಿ ಬದಲಾವಣೆ ಯಾಗಿದ್ದರಿಂದ ಹಾಗೂ ಕಾಮಗಾರಿಯನ್ನು ಕೈಗೊಳ್ಳಲು ಕಂಟ್ರಾಕ್ಟ್‌ದಾರರು ಮುಂದೆ ಬರದಿದ್ದರಿಂದ ಬಸವನ ಬಾಗೇವಾಡಿಯಲ್ಲಿ ಬಸ್ಸು ನಿರ್ಮಾಣದ ನಿರ್ಮಾಣವನ್ನು ಕೈಕೊಳ್ಳರಾಗಲಿಲ್ಲ" ಎಂದು ಹೇಳಿದ್ದೀರಿ. ಮೊದಲು ಆಗಿರುವ ಎಸ್ಟಿಮೇಟ್ ಎಷ್ಟು ತದನಂತರ ಆಗಿರುವ ಎಸ್ಟಿಮೇಟು ಎಷ್ಟು ?

† ಶ್ರೀ ಅಜೀಜ್ ಸೇಟ್.—ಬಸವನ ಬಾಗೇವಾಡಿಯ ಎಸ್ಟಿಮೇಟ್ಟು ಒಂದು ಲಕ್ಷ 25 ಸಾವಿರ ರೂಪಾಯಿ. ಜಳ್ಳಿ ಎಸ್ಟಿಮೇಟು ಒಂದು ಲಕ್ಷದ ನಲವತ್ತಾರು ಸಾವಿರದ ಎಂಟನೂರು ರೂಪಾಯಿ,

ಶ್ರೀ ಜೆ. ಎಲ್. ಕಬಾಡಿ.—ಈಗಿನ ಕಾಲಕ್ಕೆ ತಕ್ಕಂತೆ ಎಸ್ಟಿಮೇಟ್ ಕಮ್ಮಿ ಆಗಿರುವುದರಿಂದ ಮತ್ತು ಬಸ್ಸು ನಿರ್ಮಾಣದ ನಿರ್ಮಾಣಕ್ಕೆ ತಕ್ಕಂತೆ ಎಸ್ಟಿಮೇಟು ಮುಂಜೂರು ಮಾಡದೆ ಇರುವುದರಿಂದ, ಕಂಟ್ರಾಕ್ಟರುಗಳು ಈ ಕೆಲಸಮಾಡಲು ಮುಂದೆ ಬರದೇ ಇರುವುದಕ್ಕೆ ಕಾರಣ ಅಲ್ಲವೆ ?

ಶ್ರೀ ಅಜೀಜ್ ಸೇಟ್.—ಬಾಗೇವಾಡಿ ಕೆಲಸದ ಎಸ್ಟಿಮೇಟ್ ಒಂದು ಲಕ್ಷದ 99 ಸಾವಿರ ರೂಪಾಯಿಯಾಗಿದೆ. ಈ ಜಳ್ಳಿ ಕೆಲಸಕ್ಕೆ ಯಾವ ಟೆಂಡರ್ಸ್ ಬಂದಿಲ್ಲ. ಆದ್ದರಿಂದ ಎಸ್ಟಿಮೇಟ್ ರೇಟ್ಸ್ ರಿವೈಸ್ ಮಾಡಿ ಟೆಂಡರ್ ಕಾಲ್‌ಫಾರ್ ಮಾಡುತ್ತೇವೆ. ಬಾಗೇವಾಡಿ ಕೆಲಸ ಈ ವರ್ಷದಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಜಳ್ಳಿ ಬಸ್ ನಿರ್ಮಾಣ ಬಹಳ ಮುಖ್ಯವಾದ ಬಸ್ ನಿರ್ಮಾಣ ಆಗಿರುವುದರಿಂದ ಸೋರಾಪುರ, ಹುಬ್ಬಳ್ಳಿ ಗುಲ್ಬರ್ಗ ಮತ್ತು ಬಾಗಲಕೋಟೆ ಹೋಗುವ ಮಾರ್ಗದಲ್ಲಿ ಮಯಾ ಪಂಡರಾಪುರದಿಂದ ಮಧ್ಯದಲ್ಲಿದ್ದು ಮುಖ್ಯವಾದ ಸ್ಥಳವಾಗಿರುವುದರಿಂದ, ಅಲ್ಲಿ ಬಸ್ ನಿರ್ಮಾಣ ಮತ್ತು ತಂಗುವ ಮನೆಯನ್ನು ನಿರ್ಮಿಸುವುದು ಅವಶ್ಯಕವಿದೆ. ಅದಕ್ಕೋಸ್ಕರ ಆ ಕೆಲಸಗಳನ್ನು ಕೈಕೊಳ್ಳುತ್ತೀರಾ

Sri AZEEZ SAIT.—I will Examine that.

ಶ್ರೀ ಬಿ. ಎಸ್. ಪಾಟೀಲ್. —ಎಷ್ಟು ರಿವೈಸ್ ಮಾಡಿದರೂ ಸಹ ಟೆಂಡರರ್ಸ್ ಬಂದಿಲ್ಲ ಏನ್ನುವ ಎನ್ನುವ ಕಾರಣದಿಂದ ಆ ಕೆಲಸ ಹಾಗೆಯೇ ಉಳಿಯುತ್ತದೆ. ಆದ್ದರಿಂದ ತಕ್ಷಣ ಆ ಕೆಲಸವನ್ನು ಸರ್ಕಾರದವರು ತಾವೇ ತೆಗೆದುಕೊಂಡು ಮಾಡುತ್ತಾರೆಯೇ ?

ಶ್ರೀ ಅಜೀಜ್ ಸೇಟ್.—ಸರ್ಕಾರದವರು ತಾವೇ ತೆಗೆದುಕೊಂಡು ಮಾಡುವುದಕ್ಕೆ ಬರುವುದಿಲ್ಲ. ಟೆಂಡರು ಮುಖಾಂತರ ಮಾಡಬೇಕಾಗುತ್ತದೆ. ಈಯರ್‌ಮೈನ್ಸ್ ರೇಟ್ ಕಮ್ಮಿ ಇದೆ. ಏನೇ ಆದರೂ ಇದು ಹಿಂದೆ ಆಗಿದ್ದ ಸಮಾಚಾರ. ರೀಟೆಂಡರ್ ಕಾಲ್‌ಫಾರ್ ಮಾಡಿ ರಿವೈಸ್ ಎಸ್ಟಿಮೇಟ್ ಮಾಡಿ ಎಂದು ಹೇಳಿದ್ದೇವೆ.

ಶ್ರೀ ಜೆ. ಎಲ್. ಕಬಾಡಿ.—ಶ್ರೀ ದೇವರಾಜ್ ಅರಸ್‌ರವರು ಸಾರಿಗೆ ಮತ್ತು ಕಾರ್ಮಿಕ ಮಂತ್ರಿಗಳಾಗಿದ್ದಾಗ ಈ ಕೆಲಸಗಳನ್ನು ತಕ್ಷಣ ತೆಗೆದುಕೊಳ್ಳುತ್ತೇವೆಂದು ಜನತೆಗೆ ಆಶ್ವಾಸನೆ ಕೊಟ್ಟು ಈಗ 7–8 ವರ್ಷಗಳಾಗಿದ್ದರೂ ಇನ್ನೂ ಎಸ್ಟಿಮೇಟ್ ರಿವೈಸ್ ಮಾಡುತ್ತೇವೆ, ಎಕ್ವಾಮಿನ್ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ.

ಶ್ರೀ ಅಜೀಜ್ ಸೇಟ್.—ರಿಟೈರಿಂಗ್ ರೂಮ್ಸ್ ಬಗ್ಗೆ ಎಕ್ವಾಮಿನ್ ಮಾಡುತ್ತೇವೆಂದು ಹೇಳಿದೆ.

ಶ್ರೀ ಜೆ. ಎಲ್. ಕಬಾಡಿ.—ಬಸ್ ನಿರ್ಮಾಣವನ್ನು ತೆಗೆದುಕೊಳ್ಳುವುದು ನಿಜವೇ ?

ಶ್ರೀ ಅಜೀಜ್ ಸೇಟ್.—ಈಗಾಗಲೇ ಆಶ್ವಾಸನೆ ಕೊಟ್ಟಿದ್ದೇವೆ. ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—(ಆ) ಪ್ರಶ್ನೆಗೆ ಉತ್ತರವಾಗಿ 1966ನೇ ಇಸವಿಯ ಏಪ್ರಿಲ್ ಮಾಹೆಯಲ್ಲಿ 1,25,000 ರೂಪಾಯಿಗಳ ವೆಚ್ಚದಲ್ಲಿ ಮುಂಜೂರ್ಮಾಡಲಾದ ಆಂದಾಜಿನಲ್ಲಿ ಒದಗಿಸಿದ್ದ ಸ್ಥಳಾವಕಾಶದೊಡನೆ ಹೋಲಿಸಿದಲ್ಲಿ ವಾಹನ ಸಂಚಾರ ಸಾಲದೆಂದು ಕಂಡುಬಂದದ್ದರಿಂದ ನದರಿ ಕಾಮಗಾರಿಗಳನ್ನು ಇದುವರೆಗೂ ಕೈಕೊಳ್ಳರಾಗಲಿಲ್ಲ ಎಂದು ಹೇಳಿದ್ದೀರಿ. ಜನಕ್ಕೆ ಸೌಕರ್ಯ ಒದಗಿಸಿ ಕೊಡಬೇಕು ಎನ್ನುವ ದೃಷ್ಟಿಯಿಂದ ಈ ಬಸ್ ನಿರ್ಮಾಣದ ನಿರ್ಮಾಣ ಕಾರ್ಯವನ್ನು ಅತಿ ಶೀಘ್ರವಾಗಿ ತೆಗೆದುಕೊಳ್ಳುತ್ತೀರಾ ?

ಶ್ರೀ ಅಜೀಜ್ ಸೇಟ್.—ಬಾಗೇವಾಡಿಯಲ್ಲಿ ಡಿಸೈನ್ ಸ್ವಲ್ಪ ಚೇಂಜ್ ಆಗಿರುವುದರಿಂದ ಅದನ್ನು ತೆಗೆದುಕೊಳ್ಳುವುದಕ್ಕೆ ತಡವಾಯಿತು. ಈಗ ಅದರ ಎಸ್ಟಿಮೇಟ್ 1 ಲಕ್ಷ 99 ಸಾವಿರ ರೂಪಾಯಿ ಆಗಿದೆ. ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಜಳ್ಳಿಯ ಕೆಲಸಕ್ಕೆ ಟೆಂಡರರ್ಸ್ ಬರದೇ ಇರುವ ಕಾರಣ ತಡವಾಗಿದೆ. ಎಸ್ಟಿಮೇಟ್ಸ್ ಚೇಂಜ್ ಮಾಡಿ ರೀಟೆಂಡರ್ ಮಾಡಬೇಕೆಂದು ಮಾಡಿದ್ದೇವೆ. ಶೀಘ್ರದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ. ಎರ್. ಕಬಾಡಿ.—ಬಸ್‌ಸ್ಯಾಂಡ್ ಕಟ್ಟುವ ಕಾರ್ಯಕ್ರಮವನ್ನು ಯಾವ ಬೇಸಿಸ್ ಮೇಲೆ ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು).—ಇಲ್ಲಿ ಅವರು ಕೇಳಿರತಕ್ಕದ್ದು ಬಾಗೇವಾಡಿ ಮತ್ತು ಜಳ್ಳಿಗೆ ಸಂಬಂಧಪಟ್ಟದ್ದು. ಹಿಂದೆ ಇದಕ್ಕೆ ಪೌಂಡೇಷನ್ ಹಾಕಿದ್ದರೂ ಏತಕ್ಕೆ ಈ ಕೆಲಸ ಇನ್ನೂ ತೆಗೆದುಕೊಳ್ಳಲಿಲ್ಲ ಎಂದು ಕೇಳಿದರು. ನಾನು ಟ್ರಾನ್ಸ್‌ಪೋರ್ಟ್ ಮತ್ತು ಲೇಬರ್ ಮಿನಿಷ್ಟರ್ ಆಗಿದ್ದಾಗ ಇದರ ಪೌಂಡೇಷನ್ ಹಾಕಿದ್ದು ನಿಜ. ಅದಾದ ಕೆಲವು ವರ್ಷಗಳಲ್ಲಿ ಆ ಖಾತೆ ಬಿಟ್ಟಿದ್ದರಿಂದ ಅದು ಹಾಗೇ ಉಳಿದು ಹೋಯಿತು. ಈಗ 7 ವರ್ಷಗಳು ಆಗಿರುವುದರಿಂದ ಹಿಂದೆ 1,25,000 ಸಾವಿರ ಚಿಲ್ಲರೆ ರೂಪಾಯಿಗಳಿಗೆ ಆಗಿರುವ ಎಸ್ಟಿಮೇಟ್ ಪ್ರಕಾರ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಈಗ ರಿವೈಸ್ಡ್ ಎಸ್ಟಿಮೇಟ್ಸ್ ಮಾಡಬೇಕು ಎಂದು ಹೇಳಿದ್ದೇವೆ. ರಿವೈಸ್ಡ್ ಎಸ್ಟಿಮೇಟ್ ಮಾಡಿಸಿ ಕೆಲಸ ತೆಗೆದು ಕೊಳ್ಳುತ್ತೇವೆ. ಇನ್ನೊಂದು ಕಾರಣ, ಬಹುಶಃ ಎಂ.ಎಸ್. ಆರ್.ಟಿ.ಸಿ. ಯಲ್ಲಿ ನಾಕಷ್ಟು ಫಂಡ್ಸ್ ಇರಲಿಲ್ಲವೆಂದು ಕಾಣುತ್ತದೆ. ತಾವು ಹೇಳಿರತಕ್ಕ ಕೆಲಸದ ಜೊತೆಗೆ ಇನ್ನು ಕೆಲವು ಬಸ್ ಸ್ಟ್ಯಾಂಡ್ ಮಾಡಬೇಕಾದ ಕೆಲಸ ಹಾಗೆ ನಿಂತು ಹೋಗಿದೆ. ಫಂಡ್ಸ್ ಒದಗಿಸಿಕೊಂಡು ಈ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಎರ್. ಕಬಾಡಿ.—ಹಿಂದೆ ಫೌಂಡೇಷನ್ ಸ್ಟೋನ್ ತಾವು ಹಾಕಿದಾಗ ಗೆಸ್ಟ್ ಹೌಸ್ ಪ್ರೊವೈಡ್ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ. ಅದೇ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಜನತೆ ದೃಷ್ಟಿಯಿಂದ ಮತ್ತು ಸಾರಿಗೆ ಸಂಪರ್ಕ ಜಾಸ್ತಿಯಾಗುವ ದೃಷ್ಟಿಯಿಂದ ಆಶ್ವಾಸನೆ ಕೊಡುತ್ತಾರೆಯೇ ?

Sri D. DEVARAJ URS.—We will take up Bus stand. The guest house is another matter.

Construction of Building at the Bus Stand at Devarahippargi

90. Sri S. Y. PATIL (Sindagi).—

Will the Minister for Labour be pleased to state:—

(*a*) whether it has come to the notice of the Government that there is necessity of a building at the bus stand at Devarahippargi, Sindagi Taluk, Bijapur District.

(*b*) if so, whether plans and estimates have been prepared for the same ;

(*c*) if so, whether sanction has been accorded to them ?

Sri AZEEZ SAIT (Minister for Labour).—

(*a*) Yes.

(*b*) No.

(*c*) No.